**ದಿನಾಂಕ :07-11-2020 ರಂದು ಮಧ್ಯಾಹ್ನ 3.00 ಗಂಟೆಗೆ ನಡೆದ ವಾರ್ಡ್ ಸಂಖ್ಯೆ-183 ರ ವಾರ್ಡ್ ಸಮಿತಿಯ ಸಭೆಯ ನಡವಳಿಗಳು :-**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು**

1) ಶ್ರೀ ನರಸಿಂಹಶಾಸ್ತ್ರೀ ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ.

2) ಶ್ರೀ ರಾಜಶೇಖರ್.ಸಿ.ಆರ್, ಸಹಾಯಕ ಅಭಿಯಂತರರು, ಬೆಸ್ಕಾಂ ಎಸ್-15 ಉಪ ವಿಭಾಗ.

3) ಶ್ರೀ ದಿಲೀಪ್‌ಕುಮಾರ್.ಬಿ.ಓ, ಸಹಾಯಕ ಅಭಿಯಂತರರು, (ತ್ಯಾ.ನೀ.ನಿ.ವಿ.ವ್ಯಾಲಿ)

4) ಶ್ರೀ ಶ್ರೀಧರ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)

5) ಶ್ರೀಮತಿ ಐಶ್ವರ್ಯ, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)

6) ಶ್ರೀ ಗಂಗಾಧರಸ್ವಾಮಿ, ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ

7) ಶ್ರೀ ಸಿ.ಸುರೇಶ್, ಕಂದಾಯ ಪರಿವೀಕ್ಷಕರು, ಬಿ.ಬಿ.ಎಂ.ಪಿ.

8) ಶ್ರೀ ವೆಂಕಟೇಶ್, ಕಂದಾಯ ವಸೂಲಿಗಾರರು, ಬಿ.ಬಿ.ಎಂ.ಪಿ.

9) ಶ್ರೀ ಆರ್.ಅನಿತಾ, ಕಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ

**ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು :-**

1) ಶ್ರೀಮತಿ ಮಾನಿನಿ ಎಸ್, ಸಾರ್ವಜನಿಕರು

2) ಎಸ್. ವಿಜಯ್‌ಶೇಖರ್, ಸಾರ್ವಜನಿಕರು,

3) ಶ್ರೀಮತಿ ಪುಷ್ಪ ನಾರಾಯಣಸ್ವಾಮಿ, ಇಟ್ಟುಮಡು,

4) ಶ್ರೀ ಹರಿಬಾಬು, ಸಾರ್ವಜನಿಕರು

5) ಶ್ರೀ ವಿ.ವೆಂಕಟೇಶ್, ಸಾರ್ವಜನಿಕರು.

6) ಶ್ರೀ ಶ್ರೀನಿವಾಸರೆಡ್ಡಿ, ಸಾರ್ವಜನಿಕರು.

ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಪದ್ಮನಾಭನಗರ ಉಪ ವಿಭಾಗ ಹಾಗೂ ವಾರ್ಡ್ ಸಂಖ್ಯೆ-183 ರವರಾದ ಶ್ರೀ ಚೇತನ್ ಎನ್ ಎಸ್ ನಾಯಕ್ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳು, ರೆಸಿಡೆನ್ಸ್ ವೆಲ್‌ಫೇರ್ ಆಸೋಸಿಯೇಶನ್ ಹಾಗೂ ಸಾರ್ವಜನಿಕರನ್ನು ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು

ನೋಡೆಲ್ ಅಧಿಕಾರಿಗಳ ಜೊತೆಯಲ್ಲಿ 3ನೇ ಸಭೆಯನ್ನು ಅಯೋಜಿಸಲಾಗಿದ್ದು, ಪ್ರಥಮವಾಗಿ ಈ ಹಿಂದಿನ ಸಭೆಯ ನಡವಳಿಗಳ ಬಗ್ಗೆ ಚರ್ಚಿಸಿ ಈ ಬಗ್ಗೆ ವಿವಿಧ ಇಲಾಖೆಗಳಿಂದ ಕೈಗೊಂಡ ಕ್ರಮಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಪಾಲಿಕೆ ವತಿಯಿಂದ ವಾರ್ಡ್‌ನ ವಿವಿಧ ಭಾಗಗಳಲ್ಲಿ ಪ್ರತಿ ದಿನ ಕೋವಿಡ್ ಪರೀಕ್ಷೆಗಳನ್ನು ನಡೆಸುತ್ತಿದ್ದು, ಈ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸಲು ಹಾಜರಿದ್ದ ಸಾರ್ವಜನಿಕ ಪ್ರಮುಖ ಮುಖಂಡ ಮತ್ತು ರೆಸಿಡೆನ್ಸ್ ವೆಲ್‌ಫೇರ್ ಆಸೋಸಿಯೇಶನ್ ರವನ್ನು ಕೋರಲಾಯಿತು. ಮುಂದುವರಿದು ಹಾಜರಿದ್ದ ಸಾರ್ವಜನಿಕರಲ್ಲಿ ಎಲ್ಲರೂ ಮುಖಗೌಸ್‌ಗಳನ್ನು ಕಡ್ಡಾಯವಾಗಿ ಧರಿಸಲು ಸೂಚಿಸಬೇಕೆಂದು ಕೋರಿದರು ಮತ್ತು ಮೊದಲನೇ ಆದ್ಯತೆಯನ್ನು ಕೋವಿಡ್-19 ಗೆ ಒತ್ತು ನೀಡುವಂತೆ ನೋಡೆಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

Scanned by CamScanner

1. ವಾರ್ಡ್ ಸಂಖ್ಯೆ-183 ರ ಇಟ್ಟಮಡುವಿನ ಶ್ರೀಮತಿ ಮುಪ್ಪನಾರಾಯಣಸ್ವಾಮಿ ರವರು ಮಾತನಾಡಿ 10ನೇ ಬಿ ಅಡ್ಡರಸ್ತೆಯಲ್ಲಿ ಒಳಚರಂಡಿ ಪೈಪ್‌ಲೈನ್ ಹಾಳಾಗಿದ್ದು, ಅದನ್ನು ದುರಸ್ಥಿ ಪಡಿಸುವಂತೆ ಸಭೆಗೆ ತಿಳಿಸಿದರು, ಸ್ಥಳದಲ್ಲಿದ್ದ ಶ್ರೀ ದಿಲೀಪ್‌ಕುಮಾರ್.ಬಿ.ಟಿ, ಸಹಾಯಕ ಅಭಿಯಂತರರು, (ಕ್ಯಾ.ನೀ.ಸಿ.ವಿ.ವ್ಯಾಲಿ) ರವರು ದೊಡ್ಡ ಪೈಪ್‌ಗಳನ್ನು ಅಳವಡಿಸಬೇಕಾಗಿದ್ದು, ಬೃಹತ್ ಮಳೆ ನೀರು ಚರಂಡಿ ವಿಭಾಗಕ್ಕೆ ಪತ್ರ ಬರೆಯಲಾಗಿದ್ದು, ಬೃಹತ್ ಮಳೆ ನೀರು ಚರಂಡಿ ಉಪ ವಿಭಾಗದಿಂದ ಅನುಮತಿ ದೊರೆತ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೆಂದು ಸಭೆಗೆ ತಿಳಿಸಿದಾಗ ಮಾನ್ಯ ನೋಡೆಲ್ ಅಧಿಕಾರಿಯವರು ಅನುಮತಿ ದೊರೆತ ನಂತರ ಎಷ್ಟು ಸಮಯ ಬೇಕಾಗಬಹುದೆಂದು ಕೇಳಿದಾಗ ಸುಮಾರು 8 ತಿಂಗಳ ಕಾಲ ಕಾಲಾವಕಾಶ ಬೇಕಾಗುವುದೆಂದು ಸಭೆಗೆ ತಿಳಿಸಿದರು.

2) ವಾರ್ಡ್ ಸಂಖ್ಯೆ-183 ರ ಭುವನೇಶ್ವರಿನಗರದ ಶ್ರೀ ಶ್ರೀನಿವಾಸರೆಡ್ಡಿ ರವರು 3ನೇ ಎ ಅಡ್ಡರಸ್ತೆಯಿಂದ ಸೆಕೆಂಡರಿ ಮಳೆ ನೀರು ಚರಂಡಿ ಹಾದುಹೋಗಿದ್ದು, ಭುವನೇಶ್ವರಿನಗರ ಮುಖ್ಯರಸ್ತೆಗೆ ಹೊಂದಿಕೊಂಡಿರುವ 2ನೇ ಅಡ್ಡರಸ್ತೆಯಲ್ಲಿ ಚರಂಡಿಯು ಕುಸಿದ್ದು ಬಿದ್ದಿರುವುದಾಗಿ ಸಭೆಯ ಗಮನಕ್ಕೆ ತಂದಾಗ ಸಭೆಯಲ್ಲಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ಚೇತನ್ ಎನ್ ಎಸ್ ನಾಯಕ್ ರವರು ಮಾತನಾಡಿ ಸದರಿ ಕಾಮಗಾರಿಯನ್ನು ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆ ಅಡಿಯಲ್ಲಿ ಮಂಜೂರಾಗಿರುವ ರೂ 600.00 ಲಕ್ಷಗಳ ಅನುದಾನದಲ್ಲಿ ಸೆಕೆಂಡರಿ ಮಳೆ ನೀರು ಚರಂಡಿ ಅಭಿವೃದ್ಧಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅನುಮೋದನೆಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಿರುವುದರಿಂದ ಅನುಮೋದನೆ ದೊರೆತ ಕೂಡಲೇ ಎಲ್-1 ಬಿಡ್‌ದಾರರಿಗೆ ಕಾರ್ಯಾದೇಶವನ್ನು ನೀಡಿದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೆಂದು ಸಭೆಗೆ ತಿಳಿಸಿದರು. ಕಾಮಾಕ್ಯ ಮುಖ್ಯರಸ್ತೆಯಲ್ಲಿ ಮ್ಯಾನ್‌ಹೋಲ್ ಕುಸಿದಿರುವುದನ್ನು ಸಭೆಯ ಗಮನಕ್ಕೆ ತಂದಾಗ ಸಭೆಯಲ್ಲಿದ್ದ ಬಿ.ಡಬ್ಲ್ಯೂ.ಎಸ್.ಎಸ್ ಅಧಿಕಾರಿಯವರು ಮಾತಾನಾಡಿ ಮ್ಯಾನ್‌ಹೋಲ್ ಅನ್ನು ದುರಸ್ಥಿ ಪಡಿಸಲಾಗಿದ್ದು, ಮ್ಯಾನ್‌ಹೋಲ್ ಸುತ್ತ ಕುಸಿದಿರುವುದಕ್ಕೆ ಕೂಡಲೇ ವೆಟ್‌ಮಿಕ್ಸ್ ಹಾಕಿ ಡಾಂಬರೀಕರಣ ಮಾಡಲಾಗುವುದೆಂದು ಸಭೆಯ ಗಮನಕ್ಕೆ ತಂದರು.

3) ವಾರ್ಡ್ ಸಂಖ್ಯೆ-183 ರ ಭುವನೇಶ್ವರಿನಗರ ಶ್ರೀಮತಿ ಮಾನಿನಿ ರವರು ಮಾತನಾಡುತ್ತಾ ಕೆಳಗಿನ ಸಮಸ್ಯೆಗಳನ್ನು ಪ್ರಸ್ತಾಪಿಸಿದರು.

ಎ) ಭುವನೇಶ್ವರಿನಗರ ಉಧ್ಯಾನವನ ಹತ್ತಿರ ಇರುವ ಟ್ರಾನ್ಸ್‌ಫಾರ್ಮರ್ ಮೇಲೆ ಇರುವ ಮರವನ್ನು ತೆರವು ಮಾಡುವ ಬಗ್ಗೆ ಕೋರಿದಾಗ ನೋಡೆಲ್ ಅಧಿಕಾರಿಯವರು ಡಿ.ಸಿ ರಂಗನಾಥ್ ಅರಣ್ಯಾಧಿಕಾರಿ ರವರಿಗೆ ದೂರವಾಣಿ ಮುಖಾಂತರ ಮಾತನಾಡಿ ಟ್ರಾನ್ಸ್‌ಫಾರ್ಮರ್ ಮೇಲೆ ಇರುವ ಮರದ ಕೊಂಬೆಗಳನ್ನು ತೆರವುಗೊಳಿಸಲು ಸೂಚಿಸಿರುವುದಾಗಿ ಸಭೆಗೆ ತಿಳಿಸಿದರು.

ಬಿ) ವಾರ್ಡ್ ಸಂಖ್ಯೆ-183 ರಲ್ಲಿ ಬೀದಿ ದೀಪ ಮತ್ತು ಹೈಮಾಸ್ಟ್ ದೀಪಗಳು ಸಮರ್ಪಕವಾಗಿ ನಿರ್ವಹಿಸದಿರುವ ಬಗ್ಗೆ ಸಭೆಯ ಗಮನಕ್ಕೆ ತಂದಾಗ ಸಭೆಯಲ್ಲಿದ್ದ ನೋಡೆಲ್ ಅಧಿಕಾರಿಯವರು ಕೂಡಲೇ ಸಂಬಂಧಪಟ್ಟ ಸಹಾಯಕ ಅಭಿಯಂತರರು (ವಿದ್ಯುತ್) ಅಧಿಕಾರಿಗಳೊಂದಿಗೆ ದೂರವಾಣಿ ಮುಖಾಂತರ ಮಾತನಾಡಿದಾಗ ಕೂಡಲೇ ಬೀದಿ ದೀಪಗಳನ್ನು ಸರಿಪಡಿಸುವುದಾಗಿ ಸಭೆಗೆ ತಿಳಿಸಿದರು.

Scanned by CamScanner

2) ಭುವನೇಶ್ವರಿನಗರ ವಾರ್ಡ್ ಹಿಂಭಾಗದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಪೈಪ್‌ಲೈನ್‌ಗಳು ಹಾಳಾಗಿರುವುದಾಗಿ ಸಭೆಗೆ ತಿಳಿಸಿದಾಗ ಸ್ಥಳದಲ್ಲಿದ್ದ ಸಹಾಯಕ ಅಭಿಯಂತರರಾದ ಶ್ರೀ ಶ್ರೀಧರ್ ರವರು ಕೂಡಲೇ ಪೈಪ್‌ಲೈನ್ ಅಳವಡಿಸಲು ಕ್ರಮವಹಿಸುವುದಾಗಿ ಸಭೆಯ ಗಮನಕ್ಕೆ ತಂದರು.

3) ವಾರ್ಡ್ ಸಂಖ್ಯೆ-183 ರಲ್ಲಿರುವ ಉದ್ಯಾನವನಗಳಲ್ಲಿ ಭದ್ರತಾ ಸಿಬ್ಬಂದಿಯನ್ನು ನೇಮಿಸುವ ಬಗ್ಗೆ ಸಭೆಯ ಗಮನಕ್ಕೆ ತಂದಾಗ ನೋಡಲ್ ಅಧಿಕಾರಿಗಳು ಮಾತನಾಡಿ ಭದ್ರತಾ ಸಿಬ್ಬಂದಿಯನ್ನು ನೇಮಿಸಲು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಸಭೆಯ ಗಮನಕ್ಕೆ ತಂದರು.

4) ವಾರ್ಡ್ ಸಂಖ್ಯೆ-183 ರ ಭುವನೇಶ್ವರಿನಗರದ ಶ್ರೀ ವೆಂಕಟೇಶ್ ರವರು ಮಾತನಾಡಿ ಒಣಗಿದ ಮರದ ಕೊಂಬೆಗಳನ್ನು ತೆರವುಗೊಳಿಸಲು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಯವರು ದೂರವಾಣಿ ಮುಖಾಂತರ ಮಾತನಾಡಿ ಮುಂದಿನ ಸಭೆಗೆ ಅರಣ್ಯ ಸಂರಕ್ಷಾಧಿಕಾರಿಗಳು ವಾರ್ಡ್ ಸಮಿತಿ ಸಭೆಗೆ ಹಾಜರಾಗುವಂತೆ ತಿಳಿಸಿ, ಒಣಗಿದ ಮರದ ಕೊಂಬೆಗಳನ್ನು ಕೂಡಲೇ ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿದರು.

5) ವಾರ್ಡ್ ಸಂಖ್ಯೆ-183 ರ ಭುವನೇಶ್ವರಿನಗರದ ಶ್ರೀ ಹರಿಬಾಬು ರವರು ಮಾತನಾಡಿ ಗಂಗಮ್ಮ ದೇವಸ್ಥಾನ ರಸ್ತೆಯಲ್ಲಿ ಬಿದ್ದಿರುವ ರಸ್ತೆಗುಂಡಿಗಳನ್ನು ಕೂಡಲೇ ಸರಿಪಡಿಸುವಂತೆ ಸಭೆಯ ಗಮನಕ್ಕೆ ತಂದಾಗ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪದ್ಮನಾಭನಗರ ಉಪ ವಿಭಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಮಾತನಾಡಿ ಸದರಿ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಲು ಕೂಡಲೇ ಕ್ರಮ ವಹಿಸುವುದಾಗಿ ಸಭೆಯ ಗಮನಕ್ಕೆ ತಂದರು.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿ/ವಾರ್ಡ್ ಸಮಿತಿ ಅಧ್ಯಕ್ಷರು.

ವಾರ್ಡ್ ಸಮಿತಿ ಸಂಚಾಲಕರು

Scanned by CamScanner

ವಾರ್ಡ್ ಸಮಿತಿ ಸಭೆಗೆ ಹಾಜರಾಗಿದ್ದ ಅಧಿಕಾರಿಗಳು.

| ಕ್ರಮ ಸಂಖ್ಯೆ | ಹೆಸರು ಮತ್ತು ಹುದ್ದೆ | ಸಹಿ |
|---|---|---|
| 1. | ಗಂಗಾಧರಸ್ವಾಮಿ. ಹಿ.ಆ.ಪ. ವಾ.183 | SJHI 183/W 07/11/2020 |
| 2. | ಸಿ. ಸುಕೇಶ (R.I. W.183) | 07/11/2020 |
| 3. | ರಾಜಶೇಖರ. ಸ. ಅಠ C AG. ಬೆಸ್ಕಾಂ | 7/11/2020 |
| 4. | ದಿಲೀಪ್ ಕುಮಾರ್. ಬಿ. ಹಿ (AE-BWSSB) (WWM-VV) | Dilip 7/11/2020 |
| 5. | ಶ್ರೀಧರ್. ಎಸ್. ಪಿ.ಡಿ, ಬೆಂ.ಗ.ಮಂ | |
| 6. | Manini S | |
| 7. | Anitha. R Jr.H.I ward183 | 7/11/2020 |
| 8. | Aishwarya B.A (AE BWSSB SW-?) | 07/01/2020 |
| 9. | Chethan N.S. Naik AEE (BBMP) | 7/11 |
| 10. | K.Venkatesh TI (ARO(PMW)) | 7/11/2020 |
| 11. | | |
| 12. | | |
| 13. | | |
| 14. | | |
| 15. | | |
| 16. | | |
| 17. | | |
| 18. | | |
| 19. | | |

Scanned by CamScanner

ವಾರ್ಡ್ ಸಮಿತಿ ಸಭೆಗೆ ಹಾಜರಾಗಿದ್ದ ಸಾರ್ವಜನಿಕರು.

| ಕ್ರಮ ಸಂಖ್ಯೆ | ಹೆಸರು | ಸಹಿ |
|---|---|---|
| 1. | C.V. [illegible] | 9448270141 |
| 2. | Manini S | 7899720528 |
| 3. | R. Vijaya Shekar | 9886606599 |
| 4. | Pushpa Narayanaswamy | 9980220366 |
| 5. | Hari Babu M.K. | 9880731555 |
| 6. | V. Venkatesh | 9448333975 |
| 7. | Shiva Kumar. R | 9060308084 |
| 8. | SRINIVAS REDDY. K | 9901109999 |
| 9. | Devanand. Hiremath. | 9535600529. |
| 10. | | |
| 11. | | |
| 12. | | |
| 13. | | |
| 14. | | |
| 15. | | |
| 16. | | |
| 17. | | |
| 18. | | |
| 19. | | |

Scanned by CamScanner